ಕರ್ನಾಟಕ ಸರ್ಕಾರ

ಪೊಲೀಸ್ ಇಲಾಖೆ

ಸಂಖ್ಯೆ: DGIGP-STS0STS1(MISC)/6/2026

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು-560 001.

ದಿನಾಂಕ: 09.11.2026.

ಹಿಂಬರಹ

ವಿಷಯ: ಪೊಲೀಸ್ ಇಲಾಖೆಯ ಪಿಸಿ ಹಾಗೂ ಹೆಚ್‌ಸಿ ರವರುಗಳು ಖಾಕಿ ಸಮವಸ್ತ್ರಗಳಿಗೆ ಪ್ರಸ್ತುತ ಬಳೆಸುತ್ತಿರುವ ಮೆಟಲ್ ವಿಜ್ಹಲ್ ಚೈನ್ ಅನ್ನು ಬದಲಾಯಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 139 ಇಎಫ್‌ಎಸ್ 2026, ದಿನಾಂಕ:29.10.2026.
2. ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 293 ಪಿಓಪಿ 2016, ದಿನಾಂಕ:28.03.2017.
3. ಈ ಕಛೇರಿಯ ಹಿಂಬರಹ ಸಂಖ್ಯೆ:20/ಸಂಗ್ರಹ-1(3)/2016-17, ದಿನಾಂಕ:10.04.2017.

** * **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಪೊಲೀಸ್ ಕಾನ್ಸ್ಟೇಬಲ್ ಹಾಗೂ ಹೆಡ್ ಕಾನ್ಸ್ಟೇಬಲ್ ರವರುಗಳಿಗೆ ಪ್ರಸ್ತುತ ಧರಿಸುತ್ತಿರುವ ಸಮವಸ್ತ್ರದಲ್ಲಿನ ಮೆಟಲ್ ವಿಜ್ಹಲ್ ಚೈನ್‌ಗಳ ಬದಲಿಗೆ **ಖಾಕಿ ಬಣ್ಣದ ವಿಜ್ಹಲ್ ಗಾರ್ಡ್/ Lanyard ಗಳನ್ನು** ಅಳವಡಿಸಲು ಉಲ್ಲೇಖಿತ-1 ರ ಸರ್ಕಾರದ ಆದೇಶದಲ್ಲಿ ಮಂಜೂರಾತಿ ನೀಡಿ, ಆದೇಶಿಸಲಾಗಿದೆ. (ಪ್ರತಿ ಲಗತ್ತಿಸಿದೆ)

ಉಲ್ಲೇಖಿತ- 3 ರ ಈ ಕಛೇರಿಯ ಹಿಂಬರಹದಲ್ಲಿ ಸೂಚಿಸಿರುವಂತೆ, ಪಿಸಿಯಿಂದ ಪಿಎಸ್‌ಐ ಹುದ್ದೆಯವರಿಗಿನ ಅಧಿಕಾರಿ/ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ಸಣ್ಣ ಪ್ರಮಾಣದ 31 ವಿವಿಧ ಕಿಟ್ ಸಾಮಗ್ರಿಗಳನ್ನು ಆಯಾ ಸಿಬ್ಬಂದಿಗಳೇ ನೇರವಾಗಿ ಖರೀದಿಸಲು ಮಾಸಿಕ ರೂ.40/-ಗಳ ಕಿಟ್ ಸಾಮಗ್ರಿಗಳ ಭತ್ಯೆಯನ್ನು ಪಿಸಿಯಿಂದ ಪಿಎಸ್‌ಐ ರವರುಗಳಿಗೆ ನೀಡಲಾಗುತ್ತಿದೆ.

ಸದರಿ 31 ವಿವಿಧ ಕಿಟ್ ಸಾಮಗ್ರಿಗಳಲ್ಲಿ ಈ ಹಿಂದೇ ಸಿಬ್ಬಂದಿಗಳು ಖರೀದಿಸಲಾಗುತ್ತಿದ್ದ, ಮೆಟಲ್ ವಿಜ್ಹಲ್ ಚೈನ್‌ಗಳ ಬದಲಿಗೆ ಖಾಕಿ ಬಣ್ಣದ ವಿಜ್ಹಲ್ ಗಾರ್ಡ್/ Khaki Lanyard ಗಳನ್ನು ಖರೀದಿಸಿ, ಸಮವಸ್ತ್ರಕ್ಕೆ ಅಳವಡಿಸಿಕೊಳ್ಳುವಂತೆ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಪಿಸಿ ಹಾಗೂ ಹೆಚ್‌ಸಿ ರವರುಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

Digitally signed by
M ABDULLA SALEEM
Date: 09-11-2026
18:47:59

(ಡಾ. ಎಂ.ಎ. ಸಲೀಂ, ಐ.ಪಿ.ಎಸ್)
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ

ಇವರಿಗೆ,

ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ,

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪೊಲೀಸ್ ಇಲಾಖೆಯ ಪೊಲೀಸ್ ಕಾನ್ಸ್‌ಟೇಬಲ್ ಹಾಗೂ ಹೆಡ್ ಕಾನ್ಸ್‌ಟೇಬಲ್‌ಗಳ ಖಾಕಿ ಸಮವಸ್ತ್ರದಲ್ಲಿ ಪ್ರಸ್ತುತ ಬಳಸಲಾಗುತ್ತಿರುವ ಮೆಟಲ್ ವಿಜಿಲ್ ಚೈನ್‌ಗಳ ಬದಲಿಗೆ ಖಾಕಿ ಬಣ್ಣದ ವಿಜಿಲ್ ಗಾರ್ಡ್/Lanyardಗಳನ್ನು ಅಳವಡಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 67 ಇಎಫ್‌ಎಸ್ 2025, ದಿನಾಂಕ:25.07.2025

2. ಮಹಾ ನಿರ್ದೇಶಕರು ಮತ್ತು ಆರಕ್ಷಕರ ಮಹಾ ನಿರೀಕ್ಷಕರು ರವರ ಪತ್ರ ಸಂಖ್ಯೆ: DGIGP-STSOSTS1(KAP)1/2026, ದಿನಾಂಕ:11.09.2026

*****

ಪ್ರಸ್ತಾವನೆ :

ಮೇಲೆ ಓದಲಾದ (1) ರ ಆದೇಶದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಪೊಲೀಸ್ ಕಾನ್ಸ್‌ಟೇಬಲ್ ಹಾಗೂ ಹೆಡ್ ಕಾನ್ಸ್‌ಟೇಬಲ್ ರವರುಗಳಿಗೆ ನೀಡಲಾಗುತ್ತಿರುವ ಸ್ಲೋಟ್ ಹ್ಯಾಟ್ ಬದಲಿಗೆ ನೇವಿ ಬ್ಲೂ ಪೀಕ್ ಕ್ಯಾಪ್ ಅನ್ನು ವಿತರಿಸಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ (2) ರ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಮೇಲೆ ಓದಲಾದ (1) ರ ಆದೇಶದನ್ವಯ ಈಗಾಗಲೇ ರಾಜ್ಯದಲ್ಲಿನ ಪೊಲೀಸ್ ಕಾನ್ಸ್‌ಟೇಬಲ್ ಹಾಗೂ ಹೆಡ್ ಕಾನ್ಸ್‌ಟೇಬಲ್‌ಗಳಿಗೆ ನೇವಿ ಬ್ಲೂ ಪೀಕ್ ಕ್ಯಾಪ್‌ಗಳನ್ನು ಈಗಾಗಲೇ ವಿತರಿಸಲಾಗಿರುತ್ತದೆ. ಪ್ರಸ್ತುತ ಅವರ ಖಾಕಿ ಸಮವಸ್ತ್ರದಲ್ಲಿ ಬಳಸಲಾಗುತ್ತಿರುವ ಮೆಟಲ್ ವಿಜಿಲ್ ಚೈನ್‌ಗಳು ಹವಾಮಾನ ವೈಪರೀತ್ಯಗಳಿಂದಾಗಿ ತುಕ್ಕು ಹಿಡಿದು ಬೇಗನೆ ಹಾಳಾಗುವ ಸಾಧ್ಯತೆ ಇರುವುದರಿಂದ, ಇತರೆ ರಾಜ್ಯಗಳಲ್ಲಿ ಮೆಟಲ್ ವಿಜಿಲ್ ಚೈನ್‌ಗಳ ಬದಲಿಗೆ ಖಾಕಿ ಅಥವಾ ನೀಲಿ ಬಣ್ಣದ ವಿಜಿಲ್ ಗಾರ್ಡ್/Lanyardಗಳನ್ನು ಬಳಸುತ್ತಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಪೊಲೀಸ್ ಕಾನ್ಸ್‌ಟೇಬಲ್ ಹಾಗೂ ಹೆಡ್ ಕಾನ್ಸ್‌ಟೇಬಲ್‌ಗಳ ಸಮವಸ್ತ್ರದಲ್ಲಿಯೂ ಪ್ರಸ್ತುತ ಬಳಸಲಾಗುತ್ತಿರುವ ಮೆಟಲ್ ವಿಜಿಲ್ ಚೈನ್‌ಗಳ ಬದಲಿಗೆ ಖಾಕಿ ಬಣ್ಣದ ವಿಜಿಲ್ ಗಾರ್ಡ್/Lanyardಗಳನ್ನು ಅಳವಡಿಸುವುದು ಸೂಕ್ತವೆಂದು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 293 ಪಿಓಪಿ 2016, ದಿನಾಂಕ: 28.03.2017ರಲ್ಲಿ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಕಾನ್ಸ್‌ಟೇಬಲ್‌ನಿಂದ ಪೊಲೀಸ್ ಸಬ್-ಇನ್ಸ್‌ಪೆಕ್ಟರ್‌ವರೆಗಿನ ಹುದ್ದೆಗಳಲ್ಲಿರುವ ಸಿಬ್ಬಂದಿಗಳಿಗೆ ನೀಡಲಾಗುತ್ತಿದ್ದ ಸಣ್ಣ ಪ್ರಮಾಣದ ಕಿಟ್ ಸಾಮಗ್ರಿಗಳ ಬದಲಾಗಿ, ಸದರಿ ಸಾಮಗ್ರಿಗಳನ್ನು ಸಿಬ್ಬಂದಿಗಳೇ ನೇರವಾಗಿ ಖರೀದಿಸಿಕೊಳ್ಳಲು ಮಾಸಿಕ ರೂ.40/-ಗಳ ಕಿಟ್ ಸಾಮಗ್ರಿ ಭತ್ಯೆಯನ್ನು ಭವಿಷ್ಯಾವರ್ತಿಯಾಗಿ ನೀಡಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ. ಸದರಿ ಕಿಟ್ ಸಾಮಗ್ರಿಗಳಲ್ಲಿ ಮೆಟಲ್ ವಿಜಿಲ್ ಚೈನ್ ಸಹ ಒಳಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಹವಾಮಾನ ವೈಪರೀತ್ಯಗಳಿಂದ ಮೆಟಲ್ ವಿಜಿಲ್ ಚೈನ್‌ಗಳು ತುಕ್ಕು ಹಿಡಿದು ಬೇಗನೆ ಹಾಳಾಗುವ ಸಮಸ್ಯೆಯನ್ನು ನಿವಾರಿಸುವುದು ಹಾಗೂ ಪೊಲೀಸ್ ಸಮವಸ್ತ್ರದ ಏಕರೂಪತೆ ಮತ್ತು ಅಂದವನ್ನು ಕಾಪಾಡುವ ಉದ್ದೇಶದಿಂದ, ಪೊಲೀಸ್ ಕಾನ್ಸ್‌ಟೇಬಲ್ ಹಾಗೂ ಹೆಡ್ ಕಾನ್ಸ್‌ಟೇಬಲ್‌ಗಳ ಖಾಕಿ ಸಮವಸ್ತ್ರದಲ್ಲಿ ಪ್ರಸ್ತುತ ಬಳಸಲಾಗುತ್ತಿರುವ ಮೆಟಲ್ ವಿಜಿಲ್ ಚೈನ್‌ಗಳ ಬದಲಿಗೆ ಖಾಕಿ ಬಣ್ಣದ ವಿಜಿಲ್ ಗಾರ್ಡ್/Lanyardಗಳನ್ನು ಅಳವಡಿಸಲು ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 139 ಇಎಫ್‌ಎಸ್ 2026
ಬೆಂಗಳೂರು, ದಿನಾಂಕ: 29-10-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಪೊಲೀಸ್ ಕಾನ್ಸ್‌ಟೇಬಲ್ ಹಾಗೂ ಹೆಡ್ ಕಾನ್ಸ್‌ಟೇಬಲ್‌ಗಳ ಖಾಕಿ ಸಮವಸ್ತ್ರದಲ್ಲಿ ಪ್ರಸ್ತುತ ಬಳಸಲಾಗುತ್ತಿರುವ ಮೆಟಲ್ ವಿಜಿಲ್ ಚೈನ್‌ಗಳ ಬದಲಿಗೆ ಖಾಕಿ ಬಣ್ಣದ ವಿಜಿಲ್ ಗಾರ್ಡ್/Lanyardಗಳನ್ನು ಅಳವಡಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಸದರಿ ಬದಲಾವಣೆಗೆ ಸಂಬಂಧಿಸಿದ ವೆಚ್ಚವನ್ನು ಈಗಾಗಲೇ ಮಂಜೂರಾಗಿರುವ ಕಿಟ್ ಸಾಮಗ್ರಿ ಭತ್ಯೆ/ಅನುದಾನದಲ್ಲಿಯೇ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
Digitally signed by
RASHMI SATISH
Date: 29-10-2026
13:15:36

(ರಶ್ಮಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-ಎ)

ಇವರಿಗೆ:

1. ಪ್ರಧಾನ ಮಹಾ ಲೇಖಪಾಲರು (ಜಿ&ಎಸ್.ಎಸ್.ಎ), ಇ&ಎಸ್.ಎಸ್.ಎ) ಮತ್ತು (ಎ&ಇ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
2. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ, ಪೊಲೀಸ್ ಪ್ರಧಾನ ಕಛೇರಿ, ನಂ.2, ನೃಪತುಂಗ ರಸ್ತೆ, ಬೆಂಗಳೂರು-01
3. ನಿರ್ದೇಶಕರು, ಟಿಎನ್‌ಎಂಸಿ, ಖನಿಜ ಭವನ, ಬೆಂಗಳೂರು
4. ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11 & ಜಿ.ಪಂ.), ವಿಧಾನಸೌಧ, ಬೆಂಗಳೂರು.

ಪ್ರತಿ:

1. ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಕಾಸಸೌಧ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಯವರು, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ವಿಶೇಷ ಕಾರ್ಯದರ್ಶಿ (ಪೊಲೀಸ್ ಸೇವೆಗಳು) ರವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ(ಸಮನ್ವಯ), ಒಳಾಡಳಿತ ಇಲಾಖೆ ವಿಧಾನಸೌಧ, ಬೆಂಗಳೂರು.
5. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.